
# ಹಂಸಗೀತ


ನಾಗೇಶ ಹೆಗಡೆ

ಅಂದು
ಹದವಾದ ದಿನವಿತ್ತು

ತಂಪಾದ ಮನದ ಕೊಳದಲ್ಲಿ
ತೇಲಿತ್ತು ಅಚ್ಚ ಬಿಳಿ ಹಂಸ
ನೋಟ ಧ್ಯಾನಸ್ಥ

ತಟಸ್ಥ ನಿಂತಂತೆ ಕಂಡರೂ
ಇತ್ತಲ್ಲಿ ಚಲನೆ
ದಡ ಮುಟ್ಟ(ಸಿ)ಯೇ ತೀರಬೇಕೆಂಬ
ಚಿಂತೆಯಿಲ್ಲ

ಗಳಿಗೆ ಗಳಿಗೆಯೂ
ವಿಸ್ತಾರ ಕಡಲಾಗಿ
ಕಣ್ಣು ಮನ ಮೈದುಂಬಿ
ಅನುಭವ–ಅನುಭಾವದ ಆಗರವೇ ಆಗಿ
ಬೇರಿಳಿಸಿ ಹೊಮ್ಮುತ್ತಿತ್ತು
ರಸ ಭಾವ ಭಂಗಿ

ಹುಟ್ಟಿಸಿದ ಪರಮಾತ್ಮ
ಹುಲ್ಲು ತಿನ್ನಿಸಲಾರ
ನಂಬುಗೆಯ ನಾವೆಯಲಿ
ಎಲ್ಲ ನಿಶ್ಚಿಂತೆ

ಲೋಕ ಹಿತವೇ ತಾನಾಗಿ
ಬಾಳಿತ್ತು ಹಂಸ
ನೂರಾರು ವರುಷ

ಲಯ
ತಪ್ಪಿತೆಲ್ಲಿ !?

ದಿನವೊಂದು ಕ್ಷಣವಾಗಿ
ಜಾರುತಿದೆ ಆಯುಷ್ಯ
ಅರಿವೇ ಇಲ್ಲ

ಅರವತ್ತಕ್ಕೇ...
ಅರಳು ಮರುಳಾಗಿ
ಮರಳಿ ಹೋಗುವ ಗಳಿಗೆ

ಉಬ್ಬರದ
ಏರು ತಗ್ಗಿನ ನಡುವೆ
ಮಾತಿಗಿಳಿಯಿತು ಹಂಸ
ಪತರಗುಟ್ಟುತ್ತಾ...

ಕಸಿದು
ಕಾಲನ ಹರಿಗೋಲು
ನಿಂತ ಕಾಲಿನ ಮೇಲೆ
ದಡ ಮುಟ್ಟುವಾತುರ

ತಾಳಿಕೆಯೇ ಇಲ್ಲದೆ
ತಣಿದು ಬಾಳುವುದುಂಟೆ?

ಮೋಹದ ಮಾಯೆಗೆ
ದಡವೆಲ್ಲಿ? ಹೇಳು

ನೋಡಲ್ಲಿ;
ನಾವೆಯ ತಳ ಒಡೆದು
ನುಗ್ಗುತಿದೆ ಕೆಸರು

ತಟ್ಟನೆ
ಮೌನ ಧರಿಸಿದ ಹಂಸ
ನರಳಿ ಕಣ್ಮುಚಿತು.

● ವಾಣಿ ಸತೀಶ್, ತಿಪಟೂರು